**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**

**ಸಿ.ಸಿ ನಂ. 7261/2024**

ಪಿರ್ಯಾದಿ: ಕರ್ನಾಟಕ ಸರ್ಕಾರ ಪರವಾಗಿ ಬಂಗಾರಪೇಟೆ ಪೊಲೀಸ್ ಠಾಣೆ.

**– ವಿರುದ್ಧ –**

**ಆರೋಪಿಗಳು:**

1. **ವೆಂಕಟಾಚಲಪತಿ ,**
   ಬಿನ್ ಲೇಟ್ ಸುಬ್ಬರಾವ್,
   ಸುಮಾರು 47 ವರ್ಷ.

2. **ರಮೇಶ್ ,**
   ಬಿನ್ ಲೇಟ್ ಸುಬ್ಬರಾವ್,
   ಸುಮಾರು 45 ವರ್ಷ.

3. **ಲೋಕೇಶ್ ,**
   ಬಿನ್ ಸುಬ್ಬರಾಯಪ್ಪ,
   ಸುಮಾರು 43 ವರ್ಷ.

4. **ಪ್ರಕಾಶ್ ,**
   ಬಿನ್ ವೆಂಕಟಸ್ವಾಮಪ್ಪ,
   ಸುಮಾರು 42 ವರ್ಷ.

5. **ಸುನಿಲ್ ಕುಮಾರ್,**
   ಬಿನ್ ವೆಂಕಟಚಲಪತಿ,
   ಸುಮಾರು 23 ವರ್ಷ.

   ಎಲ್ಲರೂ ವಾಸಃ ಚಲಗಾನಹಳ್ಳಿ ಗ್ರಾಮ,
   ಬಾಂಗಾರಪೇಟೆ ತಾಲ್ಲೂಕು.

**ದೋಷಾರೋಪಣೆ**

ಶ್ರೀ, ಚಂದ್ರಶೇಖರ್ ಅಲಬೂರ್, ಬಿ.ಎ. ಎಲ್.ಎಲ್.ಬಿ. 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತೇನೆ.

ದಿನಾಂಕ 02.05.2023 ರಂದು ಬೆಳಿಗ್ಗೆ ಸುಮಾರು 10.00 ಗಂಟೆ ಸಮಯದಲ್ಲಿ ಚಲಗಾನಹಳ್ಳಿ ಗ್ರಾಮದ ಚಾಸಾ.1 ಆರ್. ಸುರೇಶ್ ರವರಿಗೆ ಸೇರಿದ ಸರ್ವೆ ನಂಬರ್ 52/3 ರ 2 ಗುಂಟೆ ಜಮೀನಿನೊಳಗೆ ಆರೋಪಿತರಾದ ನೀವುಗಳು ಅಕ್ರಮ ಗುಂಪು ಕಟ್ಟಿಕೊಂಡು ಹೋಗಿದ್ದು , ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರ ಮೇರೆಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಅಕ್ರಮ ಗುಂಪು ಕಟ್ಟಿಕೊಂಡು ಹೋಗಿ ಚಾಸಾ.1 ರವರು ಜಮೀನಿಗೆ ಹಾಕಿದ್ದ ಬೇಲೆಯನ್ನು ಕಿತ್ತು ನಾಶಪಡಿಸಿ ಒಳಗೆ ಹುಲ್ಲು ಹಾಕಲು ಇಟ್ಟಿದ್ದ ಕಲ್ಲುಗಳನ್ನು ಜೆ.ಸಿ.ಬಿ ಯಿಂದ ನಾಶಪಡಿಸಿರುತ್ತೀರಿ. ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 149 ರ ಮೇರೆಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ.1 ರವರು ಜಮೀನಿಗೆ ಹಾಕಿದ್ದ ಬೇಲೆಯನ್ನು ಕಿತ್ತು ನಾಶಪಡಿಸಿ ಒಳಗೆ ಹುಲ್ಲು ಹಾಕಲು ಇಟ್ಟಿದ್ದ ಕಲ್ಲುಗಳನ್ನು ಜೆ.ಸಿ.ಬಿ ಯಿಂದ ನಾಶಪಡಿಸಿ ಅದನ್ನು ಕೇಳಲು ಬಂದ ಚಾಸಾ.1 ರವರನ್ನು ಕುರಿತು ಇದು ನಮ್ಮ ಜಮೀನು ನೀನು ಹತ್ತಿರ ಬರಬೇಡವೆಂದು ಆವಾಚ್ಯ ಶಬ್ದಗಳಿಂದ ಬೈದಿದ್ದು. ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರ ಮೇರೆಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗಳಿಗೆ ತಿಳಿದಿರುವ ಭಾಷೆಯಲ್ಲಿ ತಿಳಿಸಿ ಓದಿ ಹೇಳಿ ಕೇಳಲಾಗಿ ಆರೋಪಿಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

**ದಿನಾಂಕ: 19.05.2025**

**ಸಹಿ/-**

(ಶ್ರೀ. ಚಂದ್ರಶೇಖರ್ ಅಲಬೂರು)
ಸ.ಪ್ರ.ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಬಂಗಾರಪೇಟೆ